## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
## ವಾರ್ಡ್ ಸಮಿತಿ ಸಭೆ, ದಿನಾಂಕ:07-02-2022 ರ ಸಭಾ ನಡವಳಿಗಳು

ದಿನಾಂಕ: 07-02-2022 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಆರ್.ಡಬ್ಲ್ಯೂ.ಎ**

1. ಶ್ರೀ.ಎ.ರಾಜಾ ಆರ್.ಡಬ್ಲ್ಯೂ.ಎ
2. ಶ್ರೀ.ಹೆಚ್.ರಾಹುಲ್, ಆರ್.ಡಬ್ಲ್ಯೂ.ಎ
3. ಶ್ರೀ.ಸಲ್ಮಾನ್ ಜೋಸೆಫ್. ಆರ್.ಡಬ್ಲ್ಯೂ.
4. ಶ್ರೀ.ಆರ್.ಮುರುಗನ್, ಸದಸ್ಯರು
5. ಶ್ರೀ.ರಾಮಚಂದ್ರನ್, ಸದಸ್ಯರು

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ಡಾ॥ಮಹಮೂದ್ ಅಬ್ಬಾಸ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
2. ಶ್ರೀ.ಸಾಮಂದಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:79, ಸರ್ವಜ್ಞನಗರ
3. ಶ್ರೀ/ಶ್ರೀಮತಿ.ಶ್ವೇತಾ, ಲ್ಯಾಬ್ ಟೆಕ್ನೀಷಿಯನ್. ಕಾಕ್ಸ್‌ಟೌನ್ ಪ್ರಾಥಮಿಕ ಆರೋಗ್ಯ ಕೇಂದ್ರ.
4. ಶ್ರೀ.ಡಿ.ಸುರೇಶ್, ಕಿರಿಯ ಅಭಿಯಂತರರು, ಬೆಸ್ಕಾಂ
5. ಶ್ರೀ.ಮುನಿ ಯೆಲ್ಲಪ್ಪ, ಕಂದಾಯ ವಸೂಲಿಗಾರರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | ವಾರ್ಡ್ ವ್ಯಾಪ್ತಿಯ ಎಲ್ಲಾ ಪ್ರದೇಶದಲ್ಲಿ ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | Junior Health Inspector |
| | **ಕಾಮಗಾರಿ ಇಲಾಖೆ (Engineering)** | |
| 1 | ➢ ಇಂದಿರಾ ಸ್ಲಂ ಪ್ರದೇಶದ ಸರ್ಕಾರಿ ಜಾಗದಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವುದು.<br>➢ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸುವುದು.<br>➢ ಹೊಸ ಬೈಯ್ಯಪ್ಪನಹಳ್ಳಿ ಇಂದಿರಾ ಸ್ಲಂನ ಅಂಗನವಾಡಿ ಕಟ್ಟಡವನ್ನು ಪ್ರಾರಂಭಗೊಳಿಸುವುದು. | Assistant Engineer-BBMP |
| | **ಕಂದಾಯ ಇಲಾಖೆ(Revenue Department)** | |
| 1 | ➢ ಪಾಲಿಕೆ ಆಸ್ತಿಗಳ ಗುತ್ತಿಗೆ ಮುಕ್ತಾಯವಾಗಿರುವ ಕಟ್ಟಡಗಳ ಮಾಲೀಕರಿಗೆ ನೋಟೀಸು ಜಾರಿ ಮಾಡಿ ಕಾನೂನು ರೀತ್ಯಾ ಕ್ರಮ ಕೈಗೊಂಡಿರುವ ವಿವರಗಳನ್ನು ಸಲ್ಲಿಸಲು ಸಭೆಯಲ್ಲಿ ತಿಳಿಸಿದರು.<br>➢ ಬಿ.ಬಿ.ಎಂ.ಪಿ ಹಳೆಯ ಕಟ್ಟಡಗಳ ಬಗ್ಗೆ ಪಿ.ಐ.ಡಿ ನಂ ಮತ್ತು ಇತರೆ ವಿವರಗಳ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಯೊಂದಿಗೆ ಜಂಟಿಯಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು. | ಕಂದಾಯ/ಸಹ ಕಂದಾಯ ಅಧಿಕಾರಿಗಳು |
| | | |

| | | |
|---|---|---|
| | **ಬೆಂಗಳೂರು ಜಲ ಮಂಡಳಿ (BWSSB)** | |
| 1 | ➢ ಕದಿರಯ್ಯನಪಾಳ್ಯ ಪ್ರದೇಶದಲ್ಲಿ ಎರಡು ಕಡೆ ಮ್ಯಾನ್‌ಹೋಲ್ ತುಂಬಿ ಹರಿಯುತ್ತಿದ್ದು ಮತ್ತು ನೀರಿನ ಪೈಪ್‌ಗಳು ಒಡೆದು ನೀರು ಪೋಲಾಗುತ್ತಿರುವುದನ್ನು ಕೂಡಲೇ ಸರಿಪಡಿಸಲು ಸಂಬಂಧಪಟ್ಟವರಿಗೆ ಸಭೆಯಲ್ಲಿ ಕೋರಲಾಯಿತು.<br>➢ ಕದಿರಯ್ಯನಪಾಳ್ಯ ಪ್ರದೇಶದಲ್ಲಿ ಕುಡಿಯುವ ನೀರಿನ ಒತ್ತಡವನ್ನು ಹೆಚ್ಚಿಸಿ ನೀಡರನ್ನು ಸಮರ್ಪಕವಾಗಿ ಒದಗಿಸಲು ಕೋರಲಾಯಿತು. | Assistant Engineer-BWSSB |
| | **ಬೆಸ್ಕಾಂ ಇಲಾಖೆ (BESCOM)** | |
| 1 | ➢ ಕದಿರಯ್ಯನ ಪಾಳ್ಯ ಒಳಭಾಗದ ಪ್ರದೇಶದಲ್ಲಿ 8 ವಿದ್ಯುತ್ ಕಂಬಗಳು ಶಿಥಿಲಾವಸ್ಥೆಯಲ್ಲಿದ್ದು, ಬೀಳುವ ಹಂತದಲ್ಲಿರುತ್ತದೆ. ಇದನ್ನು ಕೂಡಲೇ ಹೊಸದಾಗಿ ಅಳವಡಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು ಬೆಸ್ಕಾಂ |
| | **ಬೃಹತ್ ನೀರುಗಾಲುವೆ (SWD Dept)** | |
| 1 | ➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಾಳೇಮ್ಮ ದೇವಸ್ಥಾನ ಹಿಂಭಾಗದಲ್ಲಿ ಹಾಲೀ ಇರುವ ಬೃಹತ್ ನೀರುಗಾಲುವೆಯ ಗೋಡೆಗಳಿಗೆ ಪಾಯಿಂಟಿಂಗ್ ಮಾಡಲು ಸೂಚಿಸಿದರು. | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ |
| | **ಬಿ.ಬಿ.ಎಂ.ಪಿ ಸ್ಟ್ರೀಟ್‌ಲೈಟ್ಸ್ (Street Lights)** | |
| 1 | ➢ ಪಿ.ಎಸ್.ಕೆ.ನಾಯ್ಡು ರಸ್ತೆ, ಕಳ್ಳಹಳ್ಳಿ ಸ್ಮಶಾಣದ ಒಳಭಾಗದಲ್ಲಿ ಹಾಗೂ ರಸ್ತೆಯಲ್ಲಿ, ಹೊಸ ಬೈಯ್ಯಪ್ಪನಹಳ್ಳಿ ಇಂದಿರಾ ಸ್ಲಂನಲ್ಲಿ ಬೀದಿ ದೀಪಗಳು ಇಲ್ಲದೇ ಇರುವುದಿಲ್ಲವಾದ್ದರಿಂದ ಕೂಡಲೇ ಸದರಿ ರಸ್ತೆಗಳಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಲಾಯಿತು. | Assistant Engineer-Street Lights |
| | **ಪೊಲೀಸ್ ಇಲಾಖೆ, ಕಾ&ಸು (POLICE DEPARTMENT)** | |
| 1 | ➢ ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಹಾಗೂ ಹಗಲು ಪಾಳಯಲ್ಲಿ ಬೀಟ್ ಪೊಲೀಸರನ್ನು ನಿಯೋಜಿಸಿ ಸಾರ್ವಜನಿಕರಿಗೆ ಸೂಕ್ತ ರಕ್ಷಣೆಯನ್ನು ನೀಡಲು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಹಿಂದಿನ ಸಭೆಯಲ್ಲಿ ಕೋರಿದರು ಇದಕ್ಕೆ ಸಂಬಂಧಿಸಿದಂತೆ, ಈಗಾಗಲೇ ಬೀಟ್ ಪೊಲೀಸರನ್ನು ರಾತ್ರಿಪಾಳಯಲ್ಲಿ ನಿಯೋಜಿಸಲಾಗಿದ್ದು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೊಲೀಸರು ತಿಳಿಸಿದರು. | Police Departmrnt |
| | **ಸಂಚಾರ ಪೊಲೀಸ್ ಇಲಾಖೆ TRAFIC POLICE DEPARTMENT** | |
| 1 | ➢ ಪಿ.ಎಸ್.ಕೆ.ನಾಯ್ಡು ರಸ್ತೆಯ ಸೆಂಟ್ ಅಲೋಶಿಯಸ್ ಕಾಲೇಜು ಕಾಂಪೌಂಡ್ ವಾಲ್ ಹತ್ತಿರ ಪೊಲೀಸ್ ಚೌಕಿಯನ್ನು ನಿರ್ಮಿಸಲು ತಿಳಿಸಲಾಯಿತು.<br>➢ ಕದಿರಯ್ಯನಪಾಳ್ಯದಲ್ಲಿ ರಸ್ತೆಯನ್ನು ದಾಟುವಾಗ ಅಪಘಾತಗಳು ಸಂಭವಿಸುತ್ತಿದ್ದು, ಇದನ್ನು ತಡೆಗಟ್ಟಲು ತಿಳಿಸಲಾಯಿತು. | Trafic Police Departmrnt |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು

**ಕಾರ್ಯದರ್ಶಿಗಳು**

ಶ್ರೀ.ಸಾಮಂದಯ್ಯ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

ಡಾ॥ಮಹಮೂದ್ ಅಬ್ಬಾಸ್
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79-ಸರ್ವಜ್ಞನಗರ